# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 770 |
| ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-02-2022. |
| ಉತ್ತರಿಸುವ ಸಚಿವರು | : | ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ರಾಜ್ಯದಲ್ಲಿರುವ ಒಟ್ಟು ಮದರಸಗಳ ಸಂಖ್ಯೆ ಎಷ್ಟು; ಅವರಲ್ಲಿರುವ ಒಟ್ಟು ಬೋಧಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ವಕ್ಫ್ ಮಂಡಳಿಯಲ್ಲಿ ನೋಂದಾಯಿಸಲಾಗಿರುವ ಮದರಸಗಳ ಸಂಖ್ಯೆ-1427 ಆಗಿರುತ್ತದೆ. ಮತ್ತು ಭೋಧಕರ ಸಂಖ್ಯೆ-3844 ಆಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ. | ಮದರಸಗಳನ್ನು ಪ್ರಾರಂಭಿಸಲು ಯಾರು ಅನುಮತಿ ನೀಡುತ್ತಾರೆ; ಈ ಮದರಸಗಳ ಪ್ರಾರಂಭಕ್ಕೆ ಯಾವ ಯಾವ ದಾಖಲೆಗಳನ್ನು ಸಲ್ಲಿಸಬೇಕಾಗಿದೆ; | ಮದರಸಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಮದರಸ ಪ್ರಾರಂಭಿಸಲು ಅನುಮತಿ ಪಡೆಯಬೇಕೆಂಬ ಮಾರ್ಗಸೂಚಿಗಳು ಇರುವುದಿಲ್ಲ. ಮದರಸಗಳನ್ನು ಪ್ರಾರಂಭಿಸಲು ದಾಖಲಾತಿಗಳನ್ನು ಪಡೆಯುವ ಬಗ್ಗೆ ಈ ಇಲಾಖೆಯಿಂದ ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲ. |
| ಇ. | ಮದರಸಗಳಲ್ಲಿ ಕನ್ನಡ, ವಿಜ್ಞಾನ, ಗಣಿತ ವಿಷಯಗಳನ್ನು ಬೋಧಿಸಲಾಗುತ್ತದೆಯೇ; ಈ ಮದರಸ ಶಿಕ್ಷಣವನ್ನು ಸರಕಾರದ ಯಾವ ಶಿಕ್ಷಣ ವ್ಯವಸ್ಥೆಯು ಮಾನ್ಯ ಮಾಡುತ್ತದೆ; | ಹೌದು,<br>ಕರ್ನಾಟಕ ರಾಜ್ಯದಲ್ಲಿ ಮದರಸ ಶಿಕ್ಷಣವನ್ನು ಸರ್ಕಾರದ ಯಾವ ಶಿಕ್ಷಣ ವ್ಯವಸ್ಥೆಯು ಮಾನ್ಯ ಮಾಡುವ ಬಗ್ಗೆ ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲ. |
| ಈ. | ಮದರಸಗಳಲ್ಲಿ ಕನ್ನಡ ಕಡ್ಡಾಯ ಕುರಿತು ಸರಕಾರದ ನಿಲುವೇನು; ಕಡ್ಡಾಯ ಕುರಿತು ಸರಕಾರ ಯಾವ ಕ್ರಮ ಕೈಗೊಂಡಿದೆ? | ಮದರಸಗಳಲ್ಲಿ ಸ್ವಯಂ ಪ್ರೇರಿತವಾಗಿ ಕನ್ನಡವನ್ನು ಭೋಧಿಸಲಾಗುತ್ತಿದೆ. ಮದರಸಗಳು ಸ್ವಾಯತ್ತ ಸಂಸ್ಥೆಗಳಾಗಿರುವುದರಿಂದ ಮತ್ತು ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲವಾದ್ದರಿಂದ ಕನ್ನಡ ಕಡ್ಡಾಯಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: MWD 57 LMQ 2022

(ಶಶಿಕಲಾ ಅ.ಜೊಲ್ಲೆ)
ಮುಜರಾಯಿ, ಹಜ್
ಮತ್ತು ವಕ್ಫ್ ಸಚಿವರು.